# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

## ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ಎ<br>**Part – IVA** | ಬೆಂಗಳೂರು, **ಬುಧವಾರ, ೨೩**, ನವೆಂಬರ್, ೨೦೨೨( **ಮಾರ್ಗಶಿರ,** ೦೨, ಶಕವರ್ಷ, ೧೯೪೪)<br>**BENGALURU, WEDNESDAY, 23, NOVEMBER, 2022(MARGASHIRA , 02, SHAKAVARSHA, 1944)** | **ನಂ. ೫೮೫**<br>**No. 585** |



**ಕರ್ನಾಟಕ ಸರ್ಕಾರ**

ಸಂಖ್ಯೆ: ನಅಇ 176 ಜಿಇಎಲ್ 2022 (ಭಾ-2)(ಇ)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 23-11-2022

**ಅಧಿಸೂಚನೆ**

ಕರ್ನಾಟಕ ಪುರಸಭೆಗಳ ಕಾಯ್ದೆ 1964 (ಕರ್ನಾಟಕ ಕಾಯ್ದೆ 1964 ರ ಸಂಖ್ಯೆ 22)ರ ಕಲಂ 323ನೇ ಪ್ರಕರಣದ ಉಪ ಪ್ರಕರಣ(1)ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಬಳಸಿಕೊಂಡು, ಈ ಕೆಳಕಂಡ ಕರ್ನಾಟಕ ಪುರಸಭೆಗಳ(ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು, 2022ರ ನಿಯಮಗಳನ್ನು ರಚಿಸುವ ಕುರಿತು ಭಾದಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ / ಸಲಹೆಗಳನ್ನು ಪಡೆಯುವ ಸಲುವಾಗಿ ಅಧಿಸೂಚನೆ ಸಂಖ್ಯೆ: ನಅಇ 176 ಜಿಇಎಲ್ 2022 (ಭಾ-2)(ಇ) , ದಿನಾಂಕ 26.09.2022 ನ್ನು ಮೇಲ್ಕಂಡ ಕಾಯ್ದೆ ಕಲಂ.323ರ ಉಪ ಕಲಂ(1)ರ ರೀತ್ಯಾ ದಿನಾಂಕ 26.09.2022ರ ಕರ್ನಾಟಕ ರಾಜ್ಯಪತ್ರದ ಭಾಗ- IV-A ರಲ್ಲಿ ಪ್ರಕಟಿಸಿ ಏಳು ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಕೋರಲಾಗಿತ್ತು.

ಸದರಿ ರಾಜ್ಯಪತ್ರವು ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ದಿನಾಂಕ 26.09.2022 ರಿಂದ ಲಭ್ಯವಾಗಿದೆ.

ಈ ಬಗ್ಗೆ ಸ್ವೀಕೃತವಾಗಿದ್ದ ಸಲಹೆ / ಆಕ್ಷೇಪಣೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಪುರಸಭೆಗಳ ಕಾಯ್ದೆ 1964ರ ಕಲಂ.323 ರಲ್ಲಿನ(ಕರ್ನಾಟಕ ಕಾಯ್ದೆ ಸಂಖ್ಯೆ: 1964ರ ಸಂಖ್ಯೆ 22) ಅಧಿಕಾರದನ್ವಯ ರಾಜ್ಯ ಸರ್ಕಾರವು ಈ ಕೆಳಕಂಡಂತೆ ನಿಯಮಗಳನ್ನು ರಚಿಸಿದೆ.

**ನಿಯಮಗಳು**

**1. ಶಿರೋನಾಮೆ ಉಪಕ್ರಮ ಮತ್ತು ಅನ್ವಯಿಕ:**

(1) ಈ ನಿಯಮಗಳನ್ನು ಕರ್ನಾಟಕ ಪುರಸಭೆಗಳ (ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು, 2022 ಎಂದು ಕರೆಯಲಾಗುವುದು.

(2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಜಾರಿಗೆ ಬರಲಿವೆ.

(3) ಕರ್ನಾಟಕ ಸಿವಿಲ್ ಸೇವಾ(ಸಾಮಾನ್ಯ ನೇಮಕಾತಿ) ನಿಯಮಗಳು 1977 ಅಥವಾ ಕರ್ನಾಟಕ ಪುರಸಭೆಗಳ (ಅಧಿಕಾರಿ ಮತ್ತು ನೌಕರರ ನೇಮಕಾತಿ) ನಿಯಮಗಳು 2010 ಅಥವಾ ಷೆಡ್ಯೂಲ್‌ನಲ್ಲಿ ನಿಗಧಿಪಡಿಸಲಾದ ವಿವಿಧ ವರ್ಗವಾರು ಹುದ್ದೆಗಳ ನೇಮಕಾತಿ ಸಂಬಂಧಿಸಿದ ಇತರೆ ನೇಮಕಾತಿ ನಿಯಮಗಳು ಮತ್ತು ಕರ್ನಾಟಕ ಪುರಸಭೆ ಕಾಯ್ದೆ 1964 (ಕರ್ನಾಟಕ ಕಾಯ್ದೆ 1964ರ ಕಲಂ 22)ರ ಅಡಿಯಲ್ಲಿ ಮಾಡಲಾಗಿದೆ ಅಥವಾ ಮಾಡಿದೆ ಎಂದು ಭಾವಿಸತಕ್ಕದ್ದು, ಈ ನಿಯಮಗಳ ಉಪಬಂಧಗಳು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯತಿಗಳಲ್ಲಿ ನೇರ ನೇಮಕಾತಿಗಾಗಿ ಖಾಲಿ ಇರುವ 5533 ಪೌರಕಾರ್ಮಿಕರ ಹುದ್ದೆಗಳ ನೇಮಕಾತಿಗೆ ಅನ್ವಯವಾಗತಕ್ಕದ್ದು.

ಪರಂತು, ಈ ನಿಯಮಗಳು ಒಂದಕ್ಕಿಂತ ಹೆಚ್ಚಿನ ನೇಮಕಾತಿಗೆ ಅನ್ವಯವಾಗತಕ್ಕದ್ದಲ್ಲ.

**2. ಪರಿಭಾಷೆಗಳು**:- (1) ಈ ನಿಯಮಗಳಲ್ಲಿ ಸಂದರ್ಭವು ಅಥವಾ ಅಗತ್ಯಪಡಿಸಿದ ಹೊರತು,-

(ಎ) '**ನೇಮಕಾತಿ ಪ್ರಾಧಿಕಾರ**' ಎಂದರೆ, ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳು ಅಂದರೆ ಕರ್ನಾಟಕ ಪುರಸಭೆ (ಅಧಿಕಾರಿ ಮತ್ತು ನೌಕರರ ನೇಮಕಾತಿ) ನಿಯಮಗಳು, 2010 ನಿಯಮ 2(ಸಿ) ರಲ್ಲಿ ವಿವರಿಸಿರುವ ಅಧಿಕಾರ.

(ಬಿ) "**ನೇರ ಪಾವತಿ**" ಎಂದರೆ ನೇರವಾಗಿ ಕೆಲಸಕ್ಕೆ ತೆಗೆದುಕೊಂಡು ಸ್ಥಳೀಯ ಸಂಸ್ಥೆಗಳಿಂದ ಸಂಭಾವನೆಯನ್ನು ನೇರವಾಗಿ ಪಡೆಯುತ್ತಿರುವ ಪೌರಕಾರ್ಮಿಕರು.

(ಸಿ) "**ಕ್ಷೇಮಾಭಿವೃದ್ಧಿ**" ಎಂದರೆ, ಕರ್ನಾಟಕ ರಾಜ್ಯ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ, 2012ರ (ಕರ್ನಾಟಕ ಕಾಯ್ದೆ 2013ರ ಕಲಂ 19) ಅಡಿಯಲ್ಲಿ ಕರ್ನಾಟಕ ರಾಜ್ಯದ ನಗರ ಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು.

(ಡಿ) "**ಪೌರಕಾರ್ಮಿಕರು**" ಎಂದರೆ, ರಾಜ್ಯದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ನೇರಪಾವತಿ, ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನವೇತನದ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ಕನಿಷ್ಟ 2 ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರುವ ಮತ್ತು ಈ ನಿಯಮಗಳ ಪ್ರಾರಂಭದ ದಿನಾಂಕದಿಂದಲೂ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿ ಅಥವಾ ವ್ಯಕ್ತಿಗಳು.

(ಇ) "**ಅನುಸೂಚಿ**" ಎಂದರೆ, ಈ ನಿಯಮಗಳಲ್ಲಿ ಹೇಳಿದ ಅನುಸೂಚಿ.

(ಎಫ್) "**ಖಾಲಿ ಹುದ್ದೆಗಳು**" ಎಂದರೆ, ಈ ನಿಯಮಗಳ ಮೂಲಕ ಭರ್ತಿ ಮಾಡಬೇಕಾದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸಂಖ್ಯೆಯ ಪೌರಕಾರ್ಮಿಕರ ವೃಂದದ ಖಾಲಿ ಹುದ್ದೆಗಳು.

(2) ಈ ನಿಯಮಗಳಲ್ಲಿ ಬಳಸಿರುವ ಆದರೆ ಪರಿಭಾಷಿಸದಿರುವ ಪದಗಳು ಮತ್ತು ಪದಾವಳಿಗಳು ಕರ್ನಾಟಕ ಪುರಸಭೆ (ಅಧಿಕಾರಿ ಮತ್ತು ನೌಕರರ ನೇಮಕಾತಿ) ನಿಯಮಗಳು, 2010ರಲ್ಲಿ ಅವುಗಳಿಗೆ ನೀಡಲಾದ ಅರ್ಥವನ್ನೇ ಅನ್ವಯಿಸತಕ್ಕದ್ದು.

**3. ವಯೋಮಿತಿ**:

(1) ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮಗಳು ಅಥವಾ ಕರ್ನಾಟಕ ಪುರಸಭೆ (ಅಧಿಕಾರಿ ಮತ್ತು ನೌಕರರ ನೇಮಕಾತಿ) ನಿಯಮಗಳು, 2010 ರ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಸದರಿ ಅಧಿಸೂಚನೆ ಜಾರಿಗೆ ಬಂದ ದಿನಾಂಕದಿಂದ ಗರಿಷ್ಟ ವಯೋಮಿತಿ 55 ವರ್ಷಗಳನ್ನು ಮೀರತಕ್ಕದ್ದಲ್ಲ.

(2) ಅಭ್ಯರ್ಥಿಗಳ ವಯಸ್ಸನ್ನು ಶೈಕ್ಷಣಿಕ ದಾಖಲಾತಿಗಳು/ಆಧಾರ್ ಕಾರ್ಡ್/ಮತದಾರರ ಗುರುತಿನ ಚೀಟಿ / ಪಡಿತರ ಚೀಟಿ ದಾಖಲೆಗಳನ್ನಾಧರಿಸಿ ನಿರ್ಧರಿಸತಕ್ಕದ್ದು.

**4. ನೇಮಕಾತಿ ವಿಧಾನ**:

(1) ನೇಮಕಾತಿ ಪ್ರಾಧಿಕಾರಿಯು, ಈ ನಿಯಮಗಳ ರೀತ್ಯಾ ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳನ್ನು ಪರಿಗಣಿಸಿ ಹುದ್ದೆಗಳನ್ನು ಭರ್ತಿಮಾಡಲು ಅಗತ್ಯವಿರುವ ಖಾಲಿ ಹುದ್ದೆಗಳ ಸಂಖ್ಯೆ, ಅರ್ಹತೆ, ಆಯ್ಕೆ ವಿಧಾನಗಳನ್ನು ನಿರ್ದಿಷ್ಟಪಡಿಸಿ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ರೀತ್ಯಾ ಹುದ್ದೆಗಳನ್ನು ವರ್ಗೀಕರಿಸಿ, ರಾಜ್ಯ ಪತ್ರದಲ್ಲಿ ಪ್ರಕಟಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು, ಹಾಗೂ ಅಂತಹ ಪ್ರಕಟಣೆಯನ್ನು ರಾಜ್ಯಮಟ್ಟದಲ್ಲಿ ವ್ಯಾಪಕ ಪ್ರಚಾರದಲ್ಲಿರುವ ಕನಿಷ್ಟ 2 ದಿನ ಪತ್ರಿಕೆಗಳಲ್ಲಿ ಅದರಲ್ಲಿ ಒಂದು ಕನ್ನಡ ದಿನಪತ್ರಿಕೆಯಲ್ಲಿ ಇರುವಂತೆ ಪ್ರಚುರಪಡಿಸತಕ್ಕದ್ದು.

ಪರಂತು, ಸಾಮಾನ್ಯ ವರ್ಗ ಮತ್ತು ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಲಭ್ಯವಾಗದೇ ಇದ್ದ ಪಕ್ಷದಲ್ಲಿ ಒಂದು ಬಾರಿ ಮಾತ್ರ ವಿನಾಯಿತಿ ನೀಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಪರಿಗಣಿಸಿ ನೇಮಕಾತಿ ಮಾಡಲು ಕ್ರಮಕೈಗೊಳ್ಳತಕ್ಕದ್ದು.

(2) ನೇಮಕಾತಿ ಪ್ರಾಧಿಕಾರಿಯು, ಉಪ ನಿಯಮ (1)ರ ರೀತ್ಯಾ ಅಭ್ಯರ್ಥಿಗಳು ಸಲ್ಲಿಸಿದ ಅರ್ಜಿಗಳಲ್ಲಿ ಈ ನಿಯಮಾನುಸಾರ ನೇಮಕಾತಿಗೆ ಅರ್ಹರಾಗುವ ಅಭ್ಯರ್ಥಿಗಳ ಅರ್ಹತೆಗೆ ಅನುಗುಣವಾಗಿ (ಅಂದರೆ ನೇರಪಾವತಿ, ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ಸಲ್ಲಿಸಿದ ಸೇವಾ ಅವಧಿಯನ್ನು ಪರಿಗಣಿಸಿ) ಚಾಲ್ತಿಯಲ್ಲಿರುವ ಮೀಸಲಾತಿ ಹುದ್ದೆಗಳಿಗೊಳಪಟ್ಟು (ಸಮತಲ ಮತ್ತು ಲಂಬವಾದ) ಅರ್ಹತೆ ಪಟ್ಟಿಯನ್ನು ಚಾಲ್ತಿಯಲ್ಲಿರುವ ಯಾವುದೇ ಕಾನೂನು ಮತ್ತು ನಿಯಮಗಳ ಅನುಸಾರ ತಯಾರಿಸತಕ್ಕದ್ದು.

ಪರಂತು, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಹಾಲಿ ನೇರಪಾವತಿ, ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ಅಥವಾ ಲೋಡರ್ ಅಥವಾ ಕ್ಲೀನರ್ ಆಧಾರದಲ್ಲಿ 2 ವರ್ಷಕ್ಕಿಂತ ಕಡಿಮೆಯಿಲ್ಲದಂತೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ಹಾಗೂ ಈ ನಿಯಮ ಜಾರಿಗೆ ಬಂದ ದಿನಾಂಕದಲ್ಲಿಯೂ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಆದ್ಯತೆಯನ್ನು ನೀಡತಕ್ಕದ್ದು.

ಮುಂದುವರೆದು, ಕಡಿಮೆ ವರ್ಷ ಸೇವೆ ಸಲ್ಲಿಸಿರುವುದಕ್ಕಿಂತ ಹೆಚ್ಚು ವರ್ಷ ಸೇವೆ ಸಲ್ಲಿಸಿದವರನ್ನು ಪರಿಗಣಿಸತಕ್ಕದ್ದು. ನೇಮಕಾತಿಯಲ್ಲಿನ ಆದ್ಯತೆಯನ್ನು ನೇರಪಾವತಿ, ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿರನ್ನು ಅನುಕ್ರಮವಾಗಿ ಪರಿಗಣಿಸತಕ್ಕದ್ದು. ಪೌರಕಾರ್ಮಿಕರಿಗೆ 2 ವರ್ಷಗಳ ಮೇಲ್ಪಟ್ಟು ನಗರ ಸ್ಥಳೀಯ ಸಂಸ್ಥೆಗಳಿಂದ ವೇತನ ಪಡೆದ ದಾಖಲಾತಿಗಳನ್ನು ಹಾಗೂ ಹೊರಗುತ್ತಿಗೆಯ ನೌಕರರಿಗೆ

ಸಂಬಂಧಿಸಿದಂತೆ ಹೊರಗುತ್ತಿಗೆ ಏಜೆನ್ಸಿಯಿಂದ ಪಾವತಿಸುವ ವೇತನ, ಪಿ.ಎಫ್. ಇಎಸ್ಐ ದಾಖಲಾತಿಯನ್ನು ನೇಮಕಾತಿಯಲ್ಲಿ ಅದ್ಯತೆಗೆ ಪರಿಗಣಿಸತಕ್ಕದ್ದು.

(3) ಉಪ ನಿಯಮ (2)ರ ರೀತ್ಯಾ ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆ ಅಧಿಸೂಚಿಸಲಾದ ಖಾಲಿ ಹುದ್ದೆಗಳ ಸಂಖ್ಯೆಗೆ ಸಮನಾಗಿರತಕ್ಕದ್ದು.

(4) ಆದ್ಯತೆಯನ್ನು ನೀಡುವಲ್ಲಿ ಎರಡು ಮತ್ತು ಅದಕ್ಕಿಂತ ಹೆಚ್ಚಿನ ಅಭ್ಯರ್ಥಿಗಳ ಸೇವಾ ಅವಧಿ ಒಂದೇ ಇದ್ದ ಪಕ್ಷದಲ್ಲಿ, ಅಂತಹ ಅಭ್ಯರ್ಥಿಗಳ ಜೇಷ್ಠತೆಯನ್ನು ಅವರ ವಯಸ್ಸಿಗೆ ಅನುಗುಣವಾಗಿ ಅಂದರೆ ಹೆಚ್ಚು ವಯಸ್ಕರನ್ನು ಕಡಿಮೆ ವಯಸ್ಕರಿಗಿಂತ ಮೇಲೆ ಪರಿಗಣಿಸಬೇಕು ಹಾಗೂ ಹುಟ್ಟಿದ ದಿನಾಂಕ ಹಾಗೂ ಸೇವಾ ಅವಧಿ ಒಂದೇ ಆಗಿದ್ದಲ್ಲಿ ಲಾಟರಿ ಮುಖಾಂತರ ಪರಿಗಣಿಸತಕ್ಕದ್ದು.

(5) ನೇಮಕಾತಿ ಪ್ರಾಧಿಕಾರಿಯು ಉಪನಿಯಮ (2)ರ ರೀತ್ಯಾ ಮುಖ್ಯ ಪಟ್ಟಿಯಲ್ಲಿ ಇಲ್ಲದ ಅಭ್ಯರ್ಥಿಗಳ ಹೆಚ್ಚುವರಿ ಪಟ್ಟಿಯನ್ನು ತಯಾರಿಸತಕ್ಕದ್ದು. ಉಪನಿಯಮ (2)ರಂತೆ ಹೆಚ್ಚುವರಿ ಪಟ್ಟಿಯಲ್ಲಿ ಪ್ರತಿಯೊಂದು ಪ್ರವರ್ಗದ ಮೀಸಲಾತಿ (ಸಮತಲ ಮತ್ತು ಲಂಬವಾದ) ಗೆ ಅನುಗುಣವಾಗಿ ಮುಖ್ಯ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗುವ ಅಭ್ಯರ್ಥಿಗಳ ಶೇಕಡ 20% ರಷ್ಟು ಅಭ್ಯರ್ಥಿಗಳಿರತಕ್ಕದ್ದು. ಉಪ ನಿಯಮ (2)ರಂತೆ ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿ ಪ್ರತಿಯೊಂದು ಪ್ರವರ್ಗದ ಮೀಸಲಾತಿ (ಸಮತಲ ಮತ್ತು ಲಂಬವಾದ) ಗೆ ಕನಿಷ್ಟ ಒಬ್ಬ ಅಭ್ಯರ್ಥಿ ಇರತಕ್ಕದ್ದು ಉಪ ನಿಯಮ (2)ರಂತೆ ಆಯ್ಕೆಯಾಗಿರುವ ಅಭ್ಯರ್ಥಿಗಳು ನಿಗದಿತ ಅವಧಿಯೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ ಸದರಿ ಅಭ್ಯರ್ಥಿಗೆ ಬದಲಾಗಿ ಆದೇ ಪ್ರವರ್ಗದ ಮೀಸಲಾತಿಯ ಹೆಚ್ಚುವರಿ ಪಟ್ಟಿಯಲ್ಲಿರುವ ಮತ್ತೊಬ್ಬ ಅಭ್ಯರ್ಥಿಯನ್ನು ನೇಮಕಾತಿಗಾಗಿ ಪರಿಗಣಿಸತಕ್ಕದ್ದು

(6) ಹಾಗೆ ಉಪನಿಯಮ (2) ಮತ್ತು (5) ರ ಅಡಿಯಲ್ಲಿ ತಯಾರಿಸಲಾದ ಪಟ್ಟಿಗಳನ್ನು ಸಂಬಂದಿಸಿದ ಜಿಲ್ಲಾಧಿಕಾರಿಗಳು, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು ಮತ್ತು ಆಯ್ಕೆಯಾದ ಅಭ್ಯರ್ಥಿಗಳಿಗೆ ತಿಳಿಸತಕ್ಕದ್ದು ಹಾಗೂ ಜಾಲತಾಣದಲ್ಲಿ ಪ್ರಕಟಿಸತಕ್ಕದ್ದು. ನೇಮಕಾತಿಯ ಪಟ್ಟಿಯನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳ ಕಛೇರಿಗಳ ಜಾಲತಾಣದಲ್ಲಿ (WEBSITE) ಪ್ರಕಟಿಸತಕ್ಕದ್ದು.

(7) ನೇಮಕಾತಿ ಪ್ರಾಧಿಕಾರಿಯು ಆಯ್ಕೆ ಮಾಡಿದ ಅಭ್ಯರ್ಥಿಗಳ ಪಟ್ಟಿಯು ಅಧಿಸೂಚಿಸಿದ ಖಾಲಿ ಹುದ್ದೆಗಳು ಭರ್ತಿಯಾಗುವವರೆಗೆ ಅಥವಾ ಮುಂದಿನ ಪೌರಕಾರ್ಮಿಕರ ಆಯ್ಕೆ ಪಟ್ಟಿ ಪ್ರಕಟವಾಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಚಾಲ್ತಿಯಲ್ಲಿರುತ್ತದೆ.

**5. ಅಭ್ಯರ್ಥಿಗಳ ನೇಮಕಾತಿ**: (1) ನೇಮಕಾತಿ ಪ್ರಾಧಿಕಾರಿಯು ನಿಯಮ 4ರ ರೀತ್ಯಾ ಆಯ್ಕೆ ಪಟ್ಟಿಯಲ್ಲಿ ಒಳಗೊಂಡಿರುವಂತೆ ಅದರನುಸಾರ ಅಭ್ಯರ್ಥಿಗಳ ಹೆಸರು, ಅವರ ಹೆಸರಿನ ಮುಂದೆ ತೋರಿಸಲಾದ ಖಾಲಿ ಹುದ್ದೆಗಳಿಗನುಸಾರ ಆಯ್ಕೆಯಾದ ಅಭ್ಯರ್ಥಿಗಳು ಎಲ್ಲಾ ರೀತಿಯಿಂದ ನೇಮಕಾತಿಗೆ ಅರ್ಹರಾಗಿದ್ದಾರೆ ಎಂಬುದನ್ನು ಅಂಥ ಪರಿಶೀಲನೆಯ ಮೂಲಕ ಖಚಿತ ಪಡಿಸಿಕೊಂಡು ನೇಮಕಾತಿಗಳನ್ನು ಮಾಡತಕ್ಕದ್ದು.

(2) ನಿಯಮ 4ರ ಉಪನಿಯಮ (6) ರ ರೀತ್ಯ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದ ಮಾತ್ರಕ್ಕೆ ಅದನ್ನು ಅವರ ನೇಮಕಾತಿಯ ಹಕ್ಕು ಎಂದು ಪರಿಭಾವಿಸತಕ್ಕದ್ದಲ್ಲ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



## ಅನುಸೂಚಿ

**(ನಿಯಮ 1ಮತ್ತು 2 ನೋಡಿ)**

| ಹುದ್ದೆಯ ವಿವರ ಹಾಗೂ ವೇತನ ಶ್ರೇಣಿ | ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳ ಸಂಖ್ಯೆ | ಕನಿಷ್ಟ ವಿದ್ಯಾರ್ಹತೆ |
|---|---|---|
| ಪೌರಕಾರ್ಮಿಕರು<br>ವೇತನ ಶ್ರೇಣಿ<br>ರೂ.17000-28950 | 5533<br>(ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯತಿಗಳು) | ಕನ್ನಡ ಭಾಷೆ ಮಾತನಾಡಲು ಗೊತ್ತಿರಬೇಕು. |

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಲತಾ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ದಿ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE